ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/06/ಇಸಿಎಸ್(1)/2024

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-560001
ದಿನಾಂಕ:25.11.2024

## ಜ್ಞಾಪನ

ವಿಷಯ: 2024-25ನೇ ಸಾಲಿನಲ್ಲಿ Working Professionals (ಕೆಲಸ ಮಾಡುತ್ತಿರುವ ವೃತ್ತಿಪರ ಅಭ್ಯರ್ಥಿಗಳಿಗೆ) ಸರ್ಕಾರಿ, ಅನುದಾನಿತ & ಖಾಸಗಿ ಪಾಲಿಟೆಕ್ನಿಕ್ ಗಳಲ್ಲಿ Lateral Entry ಮುಖಾಂತರ 2ನೇ ವರ್ಷ/ 3ನೇ ಸೆಮಿಸ್ಟರ್ ಡಿಪ್ಲೋಮ ಕೋರ್ಸ್ ಗಳಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸುವ ಬಗ್ಗೆ ಮಾರ್ಗಸೂಚಿ.

ಉಲ್ಲೇಖ:
1. AICTE ನವದೆಹಲಿ ಇವರ ಸುತ್ತೋಲೆ ಸಂಖ್ಯೆ: AICTE/P&AP/APH/2023-24/02 ದಿನಾಂಕ:24.08.2023
2. ಸರ್ಕಾರದ ಪತ್ರ ಸಂಖ್ಯೆ:ಇಡಿ 124 ಡಿಟಿಇ 2023 ದಿನಾಂಕ:22.05.2024
3. AICTE ನವದೆಹಲಿ ಇವರ ಪರಿಷ್ಕೃತ ಮಾರ್ಗಸೂಚಿ ಸುತ್ತೋಲೆ ಸಂಖ್ಯೆ: AICTE/RB/APH/2023-24/01 ದಿನಾಂಕ:10.06.2024
4. ಈ ಕಛೇರಿ ಪ್ರವೇಶಾಧಿಸೂಚನೆ ಸಂಖ್ಯೆ:DTE-ADMI0ACM2/30/2024 ದಿನಾಂಕ:14.06.2024

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, AICTE ನವದೆಹಲಿ ಇವರ ಉಲ್ಲೇಖ (1) & (2) ರ ಮಾರ್ಗಸೂಚಿಗಳಂತೆ, AICTE ನವದೆಹಲಿ ಇವರು ಅನುಮೋದಿಸಿರುವ ಆಯ್ದ ಸರ್ಕಾರಿ, ಅನುದಾನಿತ & ಖಾಸಗಿ ಪಾಲಿಟೆಕ್ನಿಕ್ ಗಳಲ್ಲಿ, AICTE ಅನುಮೋದಿತ ಕೋರ್ಸ್ ಗಳಿಗೆ 2024-25ನೇ ಶೈಕ್ಷಣಿಕ ಸಾಲಿನಿಂದ, Working Professionals (ಕೆಲಸ ಮಾಡುತ್ತಿರುವ ವೃತ್ತಿಪರ ಅಭ್ಯರ್ಥಿಗಳಿಗೆ) ಗಳಿಗೆ Lateral Entry ಮೂಲಕ 2ನೇ ವರ್ಷ/ 3ನೇ ಸೆಮಿಸ್ಟರ್ ಡಿಪ್ಲೋಮ ಕೋರ್ಸ್ ಗಳಿಗೆ ಪ್ರವೇಶಾತಿಯನ್ನು ಕಲ್ಪಿಸಲು ಉಲ್ಲೇಖ (2) ರಲ್ಲಿ ಸರ್ಕಾರವು ಅನುಮೋದನೆ ನೀಡಿರುತ್ತದೆ. ಉಲ್ಲೇಖ (4) ರ ಈ ಕಛೇರಿ ಪ್ರವೇಶಾಧಿಸೂಚನೆಯಲ್ಲಿ 2024-25ನೇ ಸಾಲಿನಲ್ಲಿ ಕೆಲಸ ಮಾಡುತ್ತಿರುವ ವೃತ್ತಿಪರ ಅಭ್ಯರ್ಥಿಗಳಿಗೆ(Working Professionasl) Lateral Entry ಮುಖಾಂತರ 2ನೇ ವರ್ಷ/ 3ನೇ ಸೆಮಿಸ್ಟರ್ ಡಿಪ್ಲೋಮ ಕೋರ್ಸ್ ಗಳಿಗೆ ಪ್ರವೇಶಾತಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಮತ್ತು ಪ್ರವೇಶ ಪಡೆಯಲು ಬೇಕಾದ ಅರ್ಹತೆಗಳ ಬಗ್ಗೆ ಮಾಹಿತಿ ನೀಡಲಾಗಿದೆ. (ಪ್ರತಿ ಲಗತ್ತಿಸಿದೆ)

ಉಲ್ಲೇಖ(4) ರ ಅಧಿಸೂಚನೆಯ ಪುಟಸಂಖ್ಯೆ(5) ರ ಕೋಷ್ಟಕ-1 ರಲ್ಲಿ ITI Trade ಉತ್ತೀರ್ಣರಾದ ಅಭ್ಯರ್ಥಿಗಳು ಡಿಪ್ಲೋಮ ಕೋರ್ಸ್ ಗಳ 2ನೇ ವರ್ಷ/ 3ನೇ ಸೆಮಿಸ್ಟರ್ ಗೆ ಪ್ರವೇಶ ಪಡೆದಲ್ಲಿ ಅಭ್ಯಾಸ ಮಾಡಬೇಕಾದ Bridge Course ಗಳ ಬಗ್ಗೆ ಮಾಹಿತಿ ನೀಡಲಾಗಿದೆ.

ಉಲ್ಲೇಖ (4) ರ ಪುಟ ಸಂಖ್ಯೆ(6) ಕೋಷ್ಟಕ-2ರಲ್ಲಿ ದ್ವಿತೀಯ ಪಿಯುಸಿ (ವಿಜ್ಞಾನ)/ ಪಿಯುಸಿ (ತಾಂತ್ರಿಕ ವಿಷಯಗಳು) ಗಳಲ್ಲಿ ಉತ್ತೀರ್ಣರಾದ ಅರ್ಹ ಅಭ್ಯರ್ಥಿಗಳಿಗೆ ಅನುಬಂಧ-4 ರಲ್ಲಿರುವಂತೆ Lateral Entry ಮುಖಾಂತರ 2ನೇ ವರ್ಷ/ 3ನೇ ಸೆಮಿಸ್ಟರ್ ಡಿಪ್ಲೋಮ ಪ್ರವೇಶಕ್ಕೆ AICTE ಯ ಪ್ರವೇಶ ಮಾರ್ಗಸೂಚಿ ಪ್ರಕಾರ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಈ ಕಛೇರಿ ಜ್ಞಾಪನ ಸಂಖ್ಯೆ: ತಾಂಶಿನಿ 03 ಸಿಡಿಸಿ(1) 2019-20 ದಿನಾಂಕ:16.12.2021ರಲ್ಲಿ ತಿಳಿಸಿರುವಂತೆ ಅಭ್ಯಯಿಸಬೇಕಾದ Bridge Course ಬಗ್ಗೆ ಮಾಹಿತಿ ನೀಡಲಾಗಿದೆ.

ಮುಂದುವರೆದು ಸದರಿ ಅಧಿಸೂಚನೆಯ ಅನುಬಂಧ-2, ಅನುಬಂಧ-3 & ಅನುಬಂಧ-4 ರಲ್ಲಿ ITI Lateral Entry & PUC Lateral Entry ಮುಖಾಂತರ 2ನೇ ವರ್ಷ/ 3ನೇ ಸೆಮಿಸ್ಟರ್ ಡಿಪ್ಲೋಮ ಕೋರ್ಸ್ ಗಳಿಗೆ ಪ್ರವೇಶ ಪಡೆಯಬಹುದಾದ Trade/ ವಿಷಯಗಳ ಬಗ್ಗೆ ವಿವರವಾದ ಮಾಹಿತಿ ನೀಡಲಾಗಿದೆ.

ಪ್ರಯುಕ್ತ ಸದರಿ ಅಧಿಸೂಚನೆಯನ್ನು ವಿವರವಾಗಿ ಪರಿಶೀಲಿಸಿ, ವೃತ್ತಿಪರ ಅಭ್ಯರ್ಥಿಗಳಿಗೆ (Working Professionals) ನಿಯಮಾನುಸಾರ ಪರೀಕ್ಷೆ ನಡೆಸಲು ಕ್ರಮಕೈಗೊಳ್ಳಬೇಕೆಂದು ತಿಳಿಸಲಾಗಿದೆ.

ಈ ವಿಷಯದ ಬಗ್ಗೆ ಎಲ್ಲಾ ಪಾಲಿಟೆಕ್ನಿಕ್ ಗಳ ಪ್ರಿನ್ಸಿಪಾಲರುಗಳು/ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರುಗಳು ಆದ್ಯತೆ ಮೇರೆಗೆ ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ.

ಕಾರ್ಯದರ್ಶಿ

ಅಡಕ: ಉಲ್ಲೇಖ (4) ರ ಪ್ರವೇಶಾಧಿಸೂಚನೆ ಪ್ರತಿ

ಇವರಿಗೆ,

ರಾಜ್ಯದ ಎಲ್ಲಾ ಪಾಲಿಟೆಕ್ನಿಕ್ ಗಳ ಪ್ರಿನ್ಸಿಪಾಲರುಗಳು/ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರುಗಳಿಗೆ- ಅಗತ್ಯ ಕ್ರಮಕ್ಕಾಗಿ

ಪ್ರತಿ:
1. ಆಪ್ತಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
2. ಆಪ್ತಶಾಖೆ, ನಿರ್ದೇಶಕರು, ತಾಂತ್ರಿಕ ಶಿಕ್ಷಣ, ತಾಂತ್ರಿಕ ಶಿಕ್ಷಣ ಭವನ
3. ಶ್ರೀ ಹರೀಶ ಶೆಟ್ಟಿ, ಪ್ರಿನ್ಸಿಪಾಲರು, ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್, ಮಂಗಳೂರು- ಅಗತ್ಯ ಕ್ರಮಕ್ಕಾಗಿ
4. ಆಪ್ತಶಾಖೆ, ಕಾರ್ಯದರ್ಶಿ, ತಾಂ.ಪ.ಮಂ.
5. ಇ-ಆಡಳಿತ- ವೆಬ್ ಸೈಟ್ ನಲ್ಲಿ ಪ್ರಕಟಿಸಲು
6. ಗಣಕ ಕೇಂದ್ರ, ತಾಂ.ಪ.ಮಂ. - ಮಾಹಿತಿಗಾಗಿ